# ನಿನ್ನನೇ ನಂಬಿದೆ ನೀರಜ ನಯನ

(Version – 2)

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 115.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 338.
3. **Note:** Lyrics mentioned here are as per Ref. 1. The wordings in Ref. 2 are almost similar with few differences, which are not considered here.
4. **Note:** There is one more version with different lyrics. It is listed separately as Version – 1. This Version – 1 is popular and many singers has sung it. Even Ankita is different in Version – 1. Hence, these two versions are listed separately.
5. **Note:** This song is not available in the books of Prof. S.K. Ramachandra Rao and also in the books of Gorebala Hanumantha Rayaru.

ರಾಗ: ಆನಂದ ಭೈರವಿ ತಾಳ: ಏಕ

ನಿನ್ನನೇ ನಂಬಿದೆ ನೀರಜನಯನ
ಎನ್ನ ಪಾಲಿಸೋ ಇಂದಿರೆ ರಮಣ ॥ ಪ ॥

ಮುನ್ನ ಪಾಂಚಾಲಿಯ ಮೊರೆಯ ಲಾಲಿಸಿ ಕಾಯ್ದ
ಪನ್ನಂಗ ಶಯನ ನೀ ಪರಮ ಪುರುಷನೆಂದು ॥ ಅಪ ॥

ಹರಿ ಸರ್ವೋತ್ತಮನಹುದೆಂಬ ಬಾಲಕನ
ಹಿರಣ್ಯಕಶಿಪು ಪಿಡಿದು ಬಾಧಿಸಲು
ನರಹರಿ ರೂಪಿಂದಲವನ ವಕ್ಷವ ಸೀಳ್ದೆ
ಪರಮ ವಿಶ್ವಾತ್ಮಕನಹುದೆಂದು ಮೊರೆಹೊಕ್ಕೆ ॥ ೧ ॥

ಪಾದವ ಪಿಡಿದು ನೀರೊಳಗೆಳೆದ ನಕ್ರನ
ಬಾಧೆಗಾರದೆ ಕರಿ ಮೊರೆಯಿಡಲು

ಆದಿ ಮೂರುತಿ ಚಕ್ರದಿಂದ ನಕ್ರನ ಕೊಂದ
ವೇದಾಂತ ವೇದ್ಯ ಅನಾಥ ರಕ್ಷಕನೆಂದು || ೨ ||

ಇಳೆಗೊಡೆಯನ ತೊಡೆ ನಿನಗೇತಕೆಂದು ಆ -
ಲಲನೆ ಕೈ ಪಿಡಿದೆಳೆಯಲರ್ಭಕನ
ನಳಿನಾಕ್ಷ ನಿನ್ನನೆದೆಯೊಳಿಟ್ಟು ತಪವಿರ್ದ
ಬಲು ಬಾಲಕಗೆ ಧ್ರುವ ಪಟ್ಟಗಟ್ಟಿದನೆಂದು || ೩ ||

ಸುದತಿ ಗೌತಮ ಸತಿ ಮುನಿ ಶಾಪದಿಂದಲಿ
ಪಥದಿ ಪಾಷಾಣವಾಗಿ ಬಿದ್ದಿರಲು
ಮುದದಿಂದಲಾಕೆಯ ಮುಕ್ತ ಮಾಡಿದ ಯೋಗಿ
ಹೃದಯ ಭೂಷಣ ನಿನ್ನ ಪದ ವೈಭವವ ಕಂಡು || ೪ ||

ಪರಮ ಪಾವನೆ ಜಗದೇಕ ಮಾತೆಯನು
ದುರುಳ ರಾವಣ ಪಿಡಿದುಕೊಂಡೊಯ್ಯಲು
ಶರಣೆಂದು ವಿಭೀಷಣ ಚರಣಕೆರಕಳಾಗಿ
ಸ್ಥಿರ ಪಟ್ಟವನು ಕೊಟ್ಟ ಜಗದೀಶ ನೀನೆಂದು || ೫ ||

ಅಂಬರೀಷನೆಂಬ ನೃಪತಿ ದ್ವಾದಶಿಯನು
ಸಂಭ್ರಮದಿಂದ ಸಾಧಿಸುತಿರಲು
ಡೊಂಬೆಯಿಂದ ದೂರ್ವಾಸ ಶಪಿಸಲಾಗಿ
ಬೆಂಬಿಡದಲೆ ಚಕ್ರದಿಂದ ಕಾಯ್ದವನೆಂದು || ೬ ||

ಧರೆಯೊಳು ನಿಮ್ಮ ಮಹಿಮೆಯ ಪೊಗಳ್ವಡೆ
ಸರಸಿಜೋದ್ಭವ ಶೇಷಗಸದಳವು
ಸ್ಮರಣೆ ಮಾತ್ರದಿ ಅಜಮಿಳಗೆ ಮೋಕ್ಷವನಿತ್ತ
ಪುರಂದರ ವಿಠ್ಠಲ ಜಗದೀಶ ನೀನೆಂದು || ೭ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಗೌತಮ ಮುನಿಯ** = ರಾಮಾಯಣದಲ್ಲಿ ಬರುವ

**ಬಲವಂತ** = ಧ್ರುವೋಪಾಖ್ಯಾನ ಬರುವ

**ಸುರ ನರ ಲೋಕದಿ** = 'ತ್ವಕ್ತ್ವಾ ವೈಕುಂಠ ಮುತ್ತಮಂ, ಸ್ವಾಮಿ ಪುಷ್ಕರಿಣಿ ತೀರೇ ರಮಾಯ ಸಹ ಮೋದತೇ ' ಎಂಬ ಸ್ಥಳ ಪುರಾಣೋಕ್ತಿಯ ಛಾಯೆ

**ಹರಿ ಸರ್ವೋತ್ತಮನಹುದೆಂಬ ಬಾಲಕ** = ಪ್ರಹಲ್ಲಾದ

**ನರಹರಿ** = ನರಸಿಂಹ

**ವಿಶ್ವಾತ್ಮಕ** = ವಿಶ್ವವೆಂಬ ಹೆಸರುಳ್ಳವ

**ಇಳೆಗೊಡೆಯ** = ಉತ್ತಾನ ಪಾದರಾಜ

**ಆ ಲಲನೆ** = ಸುರುಚಿ

**ಅರ್ಭಕ** = ಧ್ರುವ

**ಧ್ರುವ ಪಟ್ಟ** = ಸ್ಥಿರ ಪಟ್ಟ

**ಗೌತಮ ಸತಿ** = ಅಹಲ್ಯೆ

**ಜಗದೇಕ ಮಾತೆ** = ಸೀತಾ ದೇವಿ

**ಡೊಂಬೆ** = ನಟನೆ

**Classification:** Keerthane
**Ankita:** purandara vittala
**Location:** Tirupati
**Category:** Vishnu aradhane, Vishnu Stuti, Pooja Tatva.
**Sub-Category:** Vishnu, draupadi, Krishna, asura, Narasimha, prahallada, niru, mosale, gaja, chakra, veda, bhumi, Dhruva, ahalya, shapa, muni, hrudaya, loka, tayi, tande, ravana, vibhishana, shiva, ambarisha, shesha, smarane, ajamila, mukti, sura, punya, vaikunta, kaadu, srinivasa,
**Pravachana:** NA
**Explanation:** NA